KABG210042382019

**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಯವರ ನ್ಯಾಯಾಲಯ ಅಥಣಿ.**

**ಸಿ.ಸಿ. ಸಂಖ್ಯೆ:** 2527/2019

ಫಿರ್ಯಾದುದಾರ - ಶ್ರೀ ಮಲ್ಲಿಕಾರ್ಜುನ ಗಂಗಪ್ಪ ಕನಶೆಟ್ಟಿ.

- ವಿರುದ್ಧ-

ಆರೋಪಿತ - ಶ್ರೀ ಸಂತೋಷ @ ಸುರೇಶ ರಾಮಪ್ಪ ಮಾಳಿ.

ಆಪಾದನೆ

ಶ್ರೀ ಸೈಯ್ಯದ ಮೊಹಿದ್ದೀನ ಉರ್ಫ ಖ್ವಾಜಾ ಪೀರಾ **3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಅಥಣಿ ಅದ ನಾನು ನಿನ್ನ ಮೇಲೆ ಈ ಕೆಳಕಂಡತೆ ಆಪಾದನೆಯನ್ನು ಹೊರೆಸುತ್ತಿದ್ದೇನೆ.

ಆರೋಪಿತನಾದ ನೀನು ಪಿರ್ಯಾದಿಗೆ ನೀಡಬೇಕಾದ ಸಾಲದ ಹಣದ ಮರುಪಾವತಿಗಾಗಿ ಎಕ್ಸಿಸ್ ಬ್ಯಾಂಕ್ ಅಥಣಿ ಶಾಖೆಯಲ್ಲಿರುವ ನಿಮ್ಮ ಖಾತೆಯ ಚೆಕ್ ನಂ.**128402** ನ್ನು ದಿನಾಂಕಃ **01.01.2019** ರೂ.**12,00,000/-** ಗಳನ್ನು ಹಣಕ್ಕೆ ನೀಡಿ ನಗದೀಕರಣಗೊಳಿಸಿಕೊಳ್ಳುವಂತೆ ತಿಳಿಸಿದ್ದು ಸದರಿ ಚೆಕ್ಕನ್ನು ಪಿರ್ಯಾದಿದಾರನು ಫೆಡರಲ್ ಬ್ಯಾಂಕ ಅಥಣಿ ಶಾಖೆಯ ಮೂಲಕ ನಗದೀಕರಣಕ್ಕಾಗಿ ಸಲ್ಲಿಸಿದ್ದು ಸದರಿ ಚೆಕ್ಕು ನಿನ್ನ ಖಾತೆಯಲ್ಲಿ **'ಸಾಕಷ್ಟು ಹಣ ಇರುವುದಿಲ್ಲ'** ಎನ್ನುವ ಹಿಂಬರಹದೊಂದಿಗೆ ಅಮಾನ್ಯವಾಗಿದ್ದು ಆ ಕುರಿತು ಪಿರ್ಯಾದಿದಾರನು ನೊಂದಾಯಿತ ಅಂಚೆ ಮುಖಾಂತರ ನೋಟಿಸನ್ನು ನಿನಗೆ ನೀಡಿರುತ್ತಾನೆ. ಸದರಿ ನೋಟಿಸು ನಿನಗೆ ಜಾರಿಯಾದರೂ ನಿಗದಿತ ಅವಧಿಯ ಒಳಗಾಗಿ ಪಿರ್ಯಾದಿದಾರನಿಗೆ ಮರು ಪಾವತಿ ಮಾಡಬೇಕಾದ ಮೇಲ್ಕಂಕ ಮೊತ್ತವನ್ನು ಪಿರ್ಯಾದಿದಾರನಿಗೆ ಮರುಪಾವತಿ ಮಾಡದೆ ಇರುವುದರಿಂದ ನನ್ನ ಸಂಜ್ಞೆಯೊಳಗೆ ಕಲಂ **138** ಲಿಖಿತ ವರ್ಗಾಣೆ ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದನೆ ಮಾಡಲಾಗಿದೆ.

ಪ್ರಶ್ನೆ 1 - ಈಗ ಓದಿ ಹೇಳಿದ ಆಪಾದನೆ ನಿನಗೆ ಅರ್ಥವಾಯಿತೇ ?

ಉತ್ತರ -

ಪ್ರಶ್ನೆ 2 - ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆ ಆಗಬೇಕೋ ?

ಉತ್ತರ -

Sd/-

(ಸೈಯ್ಯದ ಮೋಹಿದ್ದೀನ ಉರ್ಫ ಖ್ವಾಜಾಪೀರಾ)
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತುಜೆ.ಎಂ.ಎಫ್.ಸಿ., ಅಥಣಿ.

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ವಿವರಿಸಿ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದೇನೆ ಎಂದು ಈ ಮೂಲಕ ದೃಡೀಕರಿಸುತ್ತೇನೆ).

ದಿನಾಂಕಃ 20.10.2023.

Sd/-

(ಸೈಯ್ಯದ ಮೋಹಿದ್ದೀನ ಉರ್ಫ ಖ್ವಾಜಾಪೀರಾ)

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತುಜೆ.ಎಂ.ಎಫ್.ಸಿ., ಅಥಣಿ.

ಆರೋಪಿಯ ಸಹಿ.